

ರಾತ್ರಿಯ ಹೊತ್ತು ಚಟುವಟಿಕೆಯಿಂದ ಕೂಡಿರುವ ಮನೆ ಬೆಳಿಗ್ಗೆ ಖಾಲಿ ಹೊಡೆಯುತ್ತಿರುತ್ತದೆ. ಮೂರು ದಿನ ಇಲ್ಲೇ ಸುತ್ತ ಗಿರಕಿ ಹೊಡೆಯುತ್ತಿದ್ದ ಕಿರಣ್ ಒಂದು ದಿನ ತನ್ನ ಕಣ್ಣಿಗೆ ಬಿದ್ದು 'ನಿಮ್ಮತ್ರ ಮಾತಾಡಬೇಕು' ಎಂದಾಗ ಅವನ ಮುಖಭಾವ ನೋಡಿ ಒಳ ಕರೆದುಕೊಂಡಿದ್ದಳು ರಾಧಾ.

ದಟ್ಟ ಹಸಿರು ಡಿಸ್ಟಂಪರ್ ಮೆತ್ತಿಕೊಂಡ ಗೋಡೆಗಳನ್ನು ಅಲ್ಲಲ್ಲಿ ಅರ್ಧನಾರೀಶ್ವರನ ಫೋಟೊಗಳು ತುಂಬಿಕೊಂಡಿದ್ದವು. ಒಂದು ದೊಡ್ಡ ಕ್ಯಾಲೆಂಡರ್ ಮತ್ತು ಐದಾರು ಕನ್ನಡಿಗಳು ಮನೆಯೊಳಗೆ ಕಾಲಿಟ್ಟೊಡೊನೇ ಕಾಣಿಸುವಂತಿದ್ದವು. ನಿಧಾನಕ್ಕೆ ಅವನು ಇಡೀ ಮನೆಯನ್ನು ಸಣ್ಣ ಸಣ್ಣ ಹೆಜ್ಜೆಗಳನ್ನಿಟ್ಟುಕೊಂಡು ಕಣ್ತುಂಬಿಕೊಳ್ಳುವುದು ರಾಧಾಳಿಗೆ ಕಾಣುತ್ತಿತ್ತು. ಹಾಲ್‌ಗೆ ಬಂದಾಗ ಎಲ್ಲರೂ ಇನ್ನೂ ಅಲಂಕಾರ ಮಾಡಿಕೊಳ್ಳುತ್ತಿದ್ದರು. ಪುಟ್ಟ ಹುಡುಗಿಯೊಂದರ ತಲೆ ಬಾಚುತ್ತಿದ್ದ ಐವತ್ತರ ವಯಸ್ಸಿನ ದೊಡ್ಡಕ್ಕ ಹುಬ್ಬಾರಿಸಿದಾಗ ಕಿರಣ ಕೈ ಕೈ ಹೊಸಕಿಕೊಳ್ಳುತ್ತಾ 'ಅಕಾ ನನೀಗೆ ಹುಡ್ಗ ಆಗಿ ಇರಾಕ ಆಗ್ತಿಲ್ಲ' ಎಂದು ಅಳಲು ಶುರುಮಾಡಿದ್ದ. ಇವನನ್ನು ಹತ್ತಿರ ಕರೆದು ರೂಮೊಂದರೊಳಗೆ ಕರೆದೊಯ್ದು ದೊಡ್ಡಕ್ಕ ಸ್ವಲ್ಪ ಹೊತ್ತಿನ ನಂತರ ಅವನ ಸಮೇತ ಹೊರ ಬಂದು ತನ್ನ ಪರಮ ಗಡಸು ಧ್ವನಿಯಲ್ಲಿ, 'ರಾಧಾ, ಇವ್ನು ಇನ್ಮ್ಯಾಲೆ ನಿನ್ ಜೊತೀಗೇ ಇರ್ಲಿ. ಇವತ್ತಿಂದ ಎಲ್ಲಾರೂ ಈಕಿನ್ನ ಸುಕನ್ಯಾ ಅನ್ರಿ' ಎಂದು ಅವನ ತಲೆ ಸವರಿದ್ದಳು.

ಅಂದಿನಿಂದ ರಾಧಾ ಸುಕನ್ಯಾರ ಒಡನಾಟ ಶುರುವಾಯಿತು. ಸುಕನ್ಯಾಳಿಗೆ ಮನೆಯ ರೀತಿ ರಿವಾಜುಗಳನ್ನು ತಿಳಿಸುವ ಗುರುವಾದಳು ರಾಧಾ. ದಿನಗಳೆದಂತೆ ಸುಂದರ ಕ್ರಾಪಿನ ಕಿರಣ್ ಸೊಗಸಾದ ಜಡೆಯ ಸುಕನ್ಯಾ ಆಗಿ ಬದಲಾದ.